O.S 201/2008

ಪಿ. ಡಬ್ಲ್ಯೂ:2

**ಸಾಕ್ಷಿಗೆ ದಿನಾಂಕ 07.03.2026 ರಂದು ಪ್ರಮಾಣ ವಚನ ನೀಡಲಾಯಿತು.**

**ಮುಂದುವರೆದ ಪಾಟೀಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ನಿಪಿ-28 ರ ವಂಶವೃಕ್ಷದಲ್ಲಿ ಹೇಳಿರುವ ವಿಚಾರಗಳು ಗೊತ್ತಿರುತ್ತದೆ. ವಂಶವೃಕ್ಷವನ್ನು ನಾನು ಹೇಳಿ ಬರೆಸಿರುತ್ತೇನೆ. ಸಿದ್ದಯ್ಯರವರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ಸಿದ್ದಯ್ಯರವರಿಗೆ ಚಕ್ರಜೋಗಯ್ಯ ಒಬ್ಬರೇ ಮಗ ಎಂದು ವಂಶವೃಕ್ಷದಲ್ಲಿ ಹೇಳಿ ಬರೆಸಿರುತ್ತೇನೆ ಎಂದರೆ ಸರಿ. ಈ ದಾವೆಗೊಸ್ಕರ ನಿಪಿ-28 ರ ವಂಶವೃಕ್ಷವನ್ನು ಹೇಳಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಪುಟ್ಟಸಿದ್ದಮ್ಮರವರು ಚಕ್ರಜೋಗಯ್ಯರವರ ಮಗಳು ಎಂದು ತೋರಿಸಲು ನಿಪಿ-28 ರ ವಂಶವೃಕ್ಷವನ್ನು ಹೊರತುಪಡಿಸಿ ಯಾವುದೇ ದಾಖಲೆ ಹಾಜರುಪಡಿಸಿಲ್ಲ. ವಂಶವೃಕ್ಷವನ್ನು ಹೊರತುಪಡಿಸಿ ಬೇರೆ ದಾಖಲೆಗಳು ಇವೆ, ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ. ಸಿದ್ದಯ್ಯರವರಿಗೆ ಚಕ್ರಜೋಗಯ್ಯ ಒಬ್ಬರೇ ಮಗ ಎಂದು ಸುಳ್ಳು ವಂಶವೃಕ್ಷವನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಪುಟ್ಟಸಿದ್ದಮ್ಮರವರು ಚಕ್ರಜೋಗಯ್ಯರವರ ಮಗಳು ಅಲ್ಲ ಎಂದರೆ ಸರಿಯಲ್ಲ. ಪುಟ್ಟಸಿದ್ದಮ್ಮರವರು ಚಕ್ರಜೋಗಯ್ಯರವರ ಮಗಳಲ್ಲ ಆಗಾಗಿ ವಂಶವೃಕ್ಷವನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯವರಿಗೆ ಸೇರಿದ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಪ್ರಮಾಣ ಮಾಡಿ ಸುಳ್ಳು ವಂಶವೃಕ್ಷವನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ನಿಪಿ-28 ರಲ್ಲಿರುವ ಪಕ್ಷಗಾರರ ಸಂಬಂಧ ಗೊತ್ತಿಲ್ಲ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಚಕ್ರಜೋಗಯ್ಯರವರ ಸಂಬಂಧಿಕರಲ್ಲ ಆಗಾಗಿ ವಂಶವೃಕ್ಷದ ಸಂಬಂಧ ಗೊತ್ತಿಲ್ಲ ಎಂದರೆ ಸರಿಯಲ್ಲ. ವಂಶವೃಕ್ಷದ ಪ್ರಕಾರ ಸಿದ್ದಯ್ಯರವರ ಮಕ್ಕಳಿಗೆ ದಾವಾ ಸ್ವತ್ತಿನ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ಸರಿಯಲ್ಲ.

ಯಾವುದೇ ಒಬ್ಬ ವ್ಯಕ್ತಿ ಪೌತಿ ಆದರೆ ಅವರ ವಾರಸುದಾರರ ಹೆಸರಿಗೆ ಖಾತೆ ಬದಲಾವಣೆ ಆಗುತ್ತದೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.